# ಕೂಡು ಕುಟುಂಬವ ನೆನೆಯುತ್ತಾ..



ಇಂದಿನ ಪೀಳಿಗೆಯ ಹೊಸ ಚಿಗುರುಗಳಿಗೆ ತಮ್ಮ ಹಳೆ ಬೇರನ್ನು ಪರಿಚಯಿಸುವ ಒಂದು ಅಪೂರ್ವ ಕಾರ್ಯಕ್ರಮವಾಗಿತ್ತು. ಹಲವು ವರ್ಷಗಳಿಂದ ಊರಿಗೆ ಬರದಿದ್ದವರೆಲ್ಲ ಭಾಗವಹಿಸಿದ್ದರು. ನನಗಂತೂ ಅಲ್ಲಿಂದ ಬರಲು ಮನಸ್ಸೇ ಇರಲಿಲ್ಲ. ಹೊರಡುವಾಗ ಎಲ್ಲರ ಮುಖದಲ್ಲೂ ಕಳೆದುಕೊಂಡದ್ದೇನನ್ನೋ ಮರಳಿ ಪಡೆದ ಸಂತಸ ಕಾಣುತಿತ್ತು. ಇಡೀ ದಿನದ ಕಾರ್ಯಕ್ರಮ ಬಹಳ ಚೆನ್ನಾಗಿ ಮೂಡಿಬಂತು. ಎಲ್ಲರ ನೆನಪಿನಲ್ಲಿ ಉಳಿಯುವಂತಿತ್ತು.

**■ ಉಮಾ ಶಿವಶಂಕರ್, ಶಿವಮೊಗ್ಗ**

ನಮ್ಮದು ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರದ ಶಾಸ್ತ್ರಿ ಮನೆತನ. ಮೊದಲು ಅವಿಭಜಿತ ಕುಟುಂಬವಾಗಿತ್ತು. ನಂತರ ವಿದ್ಯಾಭ್ಯಾಸ ,ಉದ್ಯೋಗಕ್ಕಾಗಿ ದೂರದ ಊರುಗಳಿಗೆ ಹೋಗಬೇಕಾಗಿ ಬಂದುದರಿಂದ ಚಿಕ್ಕ,ಚಿಕ್ಕ ಕುಟುಂಬಗಳಾಯಿತು. ಎಲ್ಲರೂ ಒಟ್ಟು ಸೇರುವ ಸಂಧರ್ಭವೇ ಒದಗಿ ಬರುತ್ತಿರಲಿಲ್ಲ. ಮುದುವೆ ಮುಂತಾದ ಸಮಾರಂಭಗಳಲ್ಲಿ ಭೇಟಿಯಾಗುತ್ತಿದ್ದೆವಾದರೂ ಎಲ್ಲರೂ ಬರಲಾಗುತ್ತಿರಲಿಲ್ಲ. ಹೀಗೆ ಬಂದು ಹಾಗೆ ಹೋಗುವಂತಾಗುತ್ತಿತ್ತು.

ನಾನು ಹಿರಿಸೊಸೆಯಾಗಿರುವುದರಿಂದ ನನಗೆ ಕುಟುಂಬದ ಹಿರಿಯರೊಂದಿಗೆ ಹೆಚ್ಚು ಸಮಯ ಕಳೆಯುವ ಅವಕಾಶ ಸಿಕ್ಕಿತ್ತು. ಹಾಗಾಗಿ ನನಗೆ ಅತ್ತೆ ಮಾವ ,ಅತ್ತಿಗೆ, ನಾದಿನಿ, ಮೈದುನ, ವಾರಗಿತ್ತಿ ಇವರೆಲ್ಲರೊಂದಿಗೆ ಒಟ್ಟಾಗಿ ಸಾಮರಸ್ಯದಿಂದ ಬಾಳುವ ಕೂಡು ಕುಟುಂಬದ ಮಹತ್ವ ಗೊತ್ತು. ಒಮ್ಮೆ ನಮ್ಮ ಹತ್ತಿರದ ಸಂಬಂಧಿಗಳ ಸಮಾರಂಭಕ್ಕೆಂದು ಹೋಗಿದ್ದೆವು. ಬಹಳ ವರ್ಷಗಳ ನಂತರ ಅಲ್ಲಿಗೆ ಬಂದಿದ್ದ ನನ್ನ ನಾದಿನಿಯೊಬ್ಬರು ನನ್ನ ಮಗಳನ್ನು ಮಾತನಾಡಿಸಿದರು. ಆಗ ನನ್ನ ಮಗಳು ಕಕ್ಕಾಬಿಕ್ಕಿಯಾಗಿ ‘ಅಮ್ಮಾ , ಇವರು ಯಾರು?’ ಎಂದು ಕೇಳಿದಳು. ನಾನು ಅವಳಿಗೆ ಅವರು ನಮಗೆ ಹೇಗೆ ಸಂಬಂಧವಾಗಬೇಕು ಎಂಬುದನ್ನು ತಿಳಿ ಹೇಳಿದೆ. ಈಗಿನ ಮಕ್ಕಳಿಗೆ ಅಪ್ಪ ಅಮ್ಮ ಬಿಟ್ಟರೆ ಅತ್ತೆ, ಮಾವ, ಚಿಕ್ಕಪ್ಪ ಚಿಕ್ಕಮ್ಮ, ದೊಡ್ಡಪ್ಪ ದೊಡ್ಡಮ್ಮ ,ಅಜ್ಜ ಅಜ್ಜಿ ಸಂಬಂಧಗಳ ಪರಿಚಯವೇ ಇಲ್ಲವಲ್ಲ ಎಂದು ನನಗೆ ತುಸು ಬೇಸರವಾಯಿತು.

ಆಗ ನನಗೆ ತರಗೆಲೆಗಳಂತೆ ಚದುರಿ ಹೋಗಿರುವ ಸಂಬಂಧಿಗಳನ್ನೆಲ್ಲಾ ಒಗ್ಗೂಡಿಸುವ ಒಂದು ಕಾರ್ಯಕ್ರಮ ಮಾಡಬಾರದೇಕೆ ಎಂಬ ಆಲೋಚನೆ ಬಂದಿತು. ಈ ವಿಚಾರವನ್ನು ಗಂಡ, ಮಕ್ಕಳಿಗೆ ಹೇಳಿದಾಗ ಅವರು ಸಂತೋಷದಿಂದ ಇದಕ್ಕೆ ಬೆಂಬಲಿಸಿದರು. ಆದರೆ ಎಲ್ಲಿ, ಹೇಗೆ, ಏನು ಮಾಡುವುದು ಎಂಬ ಹತ್ತಾರು ಪ್ರಶ್ನೆಗಳು ಹುಟ್ಟಿಕೊಂಡವು. ಕೊನೆಗೆ ಎಲ್ಲರ ಹುಟ್ಟೂರಾದ ನರಸಿಂಹರಾಜಪುರದಲ್ಲೇ ಮಾಡುವುದು ಉತ್ತಮ ಎನಿಸಿತು. ಅಲ್ಲಿನ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳೋಣವೆಂದು ನಿರ್ಧರಿಸಿದೆವು. ಪೂಜೆ ಕಾರ್ಯಕ್ರಮವೆಂದರೆ ಯಾರೂ ತಪ್ಪಿಸುವುದಿಲ್ಲವೆಂಬ ಆಶಯದಿಂದ ದೇವಸ್ಥಾನದಲ್ಲೇ ಇದನ್ನು ಮಾಡಲು ಬಯಸಿದ್ದೆವು. ಎಲ್ಲರಿಗೂ ಕರೆ ಕೊಟ್ಟೆವು. ಎಲ್ಲರೂ ಸಂತೋಷದಿಂದ ಬರಲು ಒಪ್ಪಿದರು.

ಆ ದಿನ ನಮ್ಮ ಕುಟುಂಬದ ವತಿಯಿಂದ ದೇವರಿಗೆ ಸರ್ವ ಸೇವೆ, ದೀಪೋತ್ಸವ ಸೇವೆ ಮಾಡಿಸಿದೆವು. ಬೆಳಿಗ್ಗೆ ಶಾಸ್ತ್ರಿ ಕುಟುಂಬದ ಹಿರಿಕಿರಿಯರೆಲ್ಲರೂ ರುದ್ರ ಪಠಣ ಮಾಡುವಾಗ ರುದ್ರಾಭಿಷೇಕ, ಪವಮಾನ ಅಭಿಷೇಕ ಮಾಡಲಾಯಿತು. ನಂತರ ಎಲ್ಲರೂ ಹರಟುತ್ತ ಒಟ್ಟಾಗಿ ಕುಳಿತು ಊಟ ಮಾಡಿದೆವು. ನನ್ನ ಮೈದುನ, ನಾದಿನಿಯರು ಹುಟ್ಟೂರಿನಲ್ಲಿ ಕಳೆದ ತಮ್ಮ ಬಾಲ್ಯದ ದಿನಗಳನ್ನು ಮೆಲಕು ಹಾಕಿದರೆ, ಅತ್ತೆ ಮಾವಂದಿರು ತುಂಬು ಕುಟುಂಬವಿದ್ದಾಗ ಕಳೆದ ಸುಖ–ದುಃಖದ ಕ್ಷಣಗಳನ್ನು ನೆನಪಿಸಿಕೊಂಡರು. ಮೊಮ್ಮಕ್ಕಳು ನಮ್ಮ ಕುಟುಂಬ ಇಷ್ಟು ದೊಡ್ಡದಿದೆಯೇ ಎಂದು ಬೆರಗುಗಣ್ಣುಗಳಿಂದ ನೋಡುತ್ತಿದ್ದರು. ಒಟ್ಟಾರೆ ಇಂದಿನ ಪೀಳಿಗೆಯ ಹೊಸ ಚಿಗುರುಗಳಿಗೆ ತಮ್ಮ ಹಳೆ ಬೇರನ್ನು ಪರಿಚಯಿಸುವ ಒಂದು ಅಪೂರ್ವ ಕಾರ್ಯಕ್ರಮವಾಗಿತ್ತು. ಹಲವು ವರ್ಷಗಳಿಂದ ಊರಿಗೆ ಬರದಿದ್ದವರೆಲ್ಲ ಭಾಗವಹಿಸಿದ್ದರು. ನನಗಂತೂ ಅಲ್ಲಿಂದ ಬರಲು ಮನಸ್ಸೇ ಇರಲಿಲ್ಲ. ಹೊರಡುವಾಗ ಎಲ್ಲರ ಮುಖದಲ್ಲೂ ಕಳೆದುಕೊಂಡದ್ದೇನನ್ನೋ ಮರಳಿ ಪಡೆದ ಸಂತಸ ಕಾಣುತಿತ್ತು. ಇಡೀ ದಿನದ ಕಾರ್ಯಕ್ರಮ ಬಹಳ ಚೆನ್ನಾಗಿ ಮೂಡಿಬಂತು. ಎಲ್ಲರ ನೆನಪಿನಲ್ಲಿ ಉಳಿಯುವಂತಿತ್ತು.

ಯೋಜನೆ ನನ್ನದಾದರೂ ನನ್ನ ಗಂಡ, ಮಗ ಸಹಕಾರ ಕೊಟ್ಟರು. ಊರಿನಲ್ಲಿರುವ ನನ್ನ ಮೈದುನ ಭಾಸ್ಕರ ಅಲ್ಲಿಯ ವ್ಯವಸ್ಥೆಯನ್ನು ವಹಿಸಿಕೊಂಡಿದ್ದರು. ಎಲ್ಲರೂ ಒಟ್ಟಾಗಿ ಸೇರಿದ್ದ ಆ ಅಪರೂಪದ ಸಂದರ್ಭದಲ್ಲಿ ತೆಗೆದ ಫೋಟೊ ಇದು. ಬಿಡುವಿಲ್ಲದ ಒತ್ತಡದ ಜೀವನದಲ್ಲಿ ಕಳೆದು ಹೋದ ಸಂಬಂಧಗಳನ್ನು ಪುನಶ್ಚೇತನಗೊಳಿಸಿದ ಆ ದಿನ ಅವಿಸ್ಮರಣೀಯ. ■